# ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು

ದಿನಾಂಕ:16-05-2006

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ನಗರದ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಚಿಕನ್ ಗುನಿಯಾ ಹಾಗೂ ಡೆಂಗಿಜ್ವರ ಪ್ರಕರಣಗಳು ಹೆಚ್ಚಾಗಿರುತ್ತದೆ. ಈ ರೋಗವು "ಈಡಿಸ್ ಇಜಿಪ್ಟೈ" ಎಂಬ ಜಾತಿ ಸೊಳ್ಳೆಯಿಂದ ಹರಡುತ್ತದೆ. ಈ ಎರಡೂ ರೋಗಗಳ ನಿಯಂತ್ರಣ ಕ್ರಮ ಒಂದೇ ಅಗಿದ್ದು, ಈ ಕೆಳಕಂಡಂತೆ ಮುನ್ನೆಚ್ಚರಿಕೆ ಕ್ರಮವಹಿಸಲು ನೂಚಿಸಿರುತ್ತದೆ.

1. ಮನೆಯೊಳಗೆ ಮತ್ತು ಮೇಲ್ಛಾವಣಿಯ ನೀರಿನ ತೊಟ್ಟಿಗಳನ್ನು ತಪ್ಪದೇ ವಾರಕ್ಕೊಮ್ಮೆ ನೀರನ್ನು ಖಾಲಿ ಮಾಡಿ ಒಣಗಿಸಿ ಮತ್ತೆ ಭರ್ತಿ ಮಾಡಿ ಭದ್ರವಾಗಿ ಮುಚ್ಚಳಿಕೆಯಿಂದ ಮುಚ್ಚುವುದು
2. ಮನೆಯ ಸುತ್ತಮುತ್ತಲೂ ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿ ಹಾಗೂ ನೀರು ನಿಲ್ಲದಂತೆ ಎಚ್ಚರಿಕೆ ವಹಿಸುವುದು.
3. ಒಡೆದ ಬಾಟಲಿ, ಟಿನ್, ಟೈರ್, ತೆಂಗಿನ ಚಿಪ್ಪುಗಳು ಇತ್ಯಾದಿಗಳಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು.
4. ಏರ್ ಕೂಲರ್‌ಗಳಲ್ಲಿ ನೀರನ್ನು ಆಗಾಗ್ಗೆ ಬದಲಾಯಿಸುತ್ತಿರಬೇಕು.
5. ಏರ್ ಕೂಲರ್‌ಗಳು ಕೆಟ್ಟಾಗ/ಉಪಯೋಗಿಸದೇ ಇದ್ದಾಗ ಏರ್‌ಕೂಲರ್‌ನ ನೀರನ್ನು ಖಾಲಿ ಮಾಡಬೇಕು.
6. ಹಗಲು ಹೊತ್ತಿನಲ್ಲಿ ನಿದ್ದೆ ಮಾಡುವ ಮಕ್ಕಳು ಮತ್ತು ವಿಶ್ರಾಂತಿ ಪಡೆಯುವ ವಯಸ್ಸಾದವರು ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಬೇಕು.
7. ಕಿಟಕಿ ಬಾಗಿಲುಗಳಿಗೆ ಸೊಳ್ಳೆ ನಿಯಂತ್ರಣ ಜಾಲರಿ ಅಳವಡಿಸಬೇಕು.
8. ಸೊಳ್ಳೆ ನಿರೋಧಕಗಳಾದ ಸೊಳ್ಳೆಭತ್ತಿ/ಚರ್ಮ ಲೇಪನಗಳು ಮೊದಲಾದವುಗಳನ್ನು ಉಪಯೊಗಿಸಬೇಕು.
9. ಜ್ವರದ ಲಕ್ಷಣಗಳು ಯಾರಿಗಾದರೂ ಕಾಣಿಸಿದಲ್ಲಿ ತಕ್ಷಣವೇ ಹತ್ತಿರದ ಸರ್ಕಾರಿ ಅಸ್ಪತ್ರೆಗೆ ತಿಳಿಸಿ ಸೂಕ್ತ ಚಿಕಿತ್ಸೆ ನೀಡಲು ಸಹಕರಿಸಿ.

ಸಹಿ/–
ಅಧ್ಯಕ್ಷರು:ಉಪಾಧ್ಯಕ್ಷರು,ಮತ್ತು ಸದಸ್ಯರು
ನಗರಸಭೆ, ಚಿಕ್ಕಮಗಳೂರು.

ಸಹಿ/–
ಪೌರಾಯುಕ್ತರು,
ನಗರಸಭೆ, ಚಿಕ್ಕಮಗಳೂರು

Document Produced by deskPDF Unregistered :: http://www.docudesk.com